## ೨. ಶಬರಿ

**ಆ) ೩-೪ ವಾಕ್ಯದಲ್ಲಿ ಉತ್ತರಿಸಿರಿ**

**೧. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**

ಉ) ಸೀತೆ ದೊರೆಯುವಳೇ, ಭೂಮಿಜಾತೆ ನನ್ನ ಪ್ರೀತಿಯ ಕಲ್ಪಲತೆ, ದೊರೆಯುವಳೆ ನನ್ನ ಚಲುವೆ? ಗಿರಿವನಗಳೇ, ಹೇಳಿರಿ ನಾ ಬೇಡುವೆನು. ದೊರೆಯುವಳೆ? ದೊರೆಯುವಳೆ? ನನ್ನ ಸೀತೆ ಅವಳಿರುವ ಜಾಗವನ್ನು ತಿಳಿದಿರುವಿರಾ ಹೇಳಿರಿ ಈ ದುಃಖದ ಬೆಂಕಿ ಆರುವುದಿಲ್ಲವೆ, ನನ್ನೆದೆಯ ಸುಡದೆ ಬಿಡುವುದಿಲ್ಲವೇ? ಹೇಳಿರಿ ದೊರೆಯುವಳೆ ನನ್ನ ಸೀತೆ ಎಂದು ಪ್ರಾರ್ಥಿಸಿದನು.

**೨. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?**

ಉ) ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ಕಾಂತಿಯನ್ನು ಕಳೆದುಕೊಂಡರೆ, ಜಗತ್ತಿಗೆ ಬೆಳಕನ್ನು ಕಾಂತಿಯನ್ನು ನೀಡುವವರು ಯಾರು? ಶ್ರೀರಾಮನಾದ ನೀನೇ ಧೈರ್ಯ ಕೆಟ್ಟರೆ ಸ್ಥೈರ್ಯಕ್ಕೆ ದಾರಿ ತೋರುವವರು ಚಿತ್ರಕೂಟದಲ್ಲಿ ನನ್ನ ಅಹಂಕಾರದಿಂದ ಅತ್ತಿಗೆ ಸೀತೆಯನ್ನು ಒಬ್ಬೊಂಟಿಯಾಗಿ ಬಿಟ್ಟಿದ್ದು ನಾನು ಮಾಡಿದ ಅಪರಾಧ ನನ್ನನ್ನು ಕ್ಷಮಿಸು ಎಂದನು.

**೩. ರಾಮನ ಸ್ವಾಗತಕ್ಕೆ ಶಬರಿಯು ಮಾಡಿಕೊಂಡಿದ್ದ ಸಿದ್ಧತೆಗಳೇನು?**

ಉ) ರಾಮ ಬರುವನೆಂದು ಶಬರಿ ಅತ್ಯಂತ ಸಿಹಿಯಾದ ಹಣ್ಣುಗಳನ್ನು ತಂದಿರುವೆ ಆ ಹಣ್ಣುಗಳನ್ನು ರಾಮ ತಿಂದರೆ ಮಾತ್ರ ಅದರ ಸಿಹಿ ಅತಿಯಾಗುವುದು ದುಂಬಿಗಳು ಮಕರಂದವನ್ನು ಹೀರದಿರುವ ಸುವಾಸನೆ ಭರಿತ ಹೂಗಳನ್ನು ತಂದಿರುವೆನು ಅದನ್ನು ಸ್ವೀಕರಿಸಿದರೆ ಹೂವಿನ ಸಾರ್ಥಕತೆ. ಅಲ್ಲದೆ ಸಿಹಿಯಾದ ಸುಗಂಧ ಪೂರಿತ ಜೇನುತುಪ್ಪ ಬೆರೆಸಿ ಮಾಡಿರುವ ಪಾನಕ ಎಲ್ಲವನ್ನು ರಾಮನಿಗೆ ನೀಡಲು ಸಿದ್ಧಮಾಡಿಕೊಂಡಿದ್ದಳು.

**೪. ಶಬರಿ ರಾಮಲಕ್ಷ್ಮಣವನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**

ಉ) ಶಬರಿಯು ರಾಮಲಕ್ಷ್ಮಣರು ಎದುರುಗೊಂಡಾಗ ಬೆರಗಾಗಿ ನಂತರ ಹತ್ತಿರ ಹೋಗಿ ರಾಮನನ್ನು ಮುಟ್ಟಿ ನೋಡಿ ಪಾದಗಳಿಗೆ ನಮಸ್ಕರಿಸಿ ಕಣ್ಣಿಗೊತ್ತಿಕೊಂಡು ಕಣ್ಣೀರು ಸುರಿಸಿ, ಬನ್ನಿರಿ ಎಂದು ಗದ್ಗದ ಸ್ವರದಲ್ಲಿ ಕರೆದು ಅಯ್ಯೋ ನೆನ್ನೆಗಿಂತ ಅಷ್ಟು ಚೆನ್ನಾಗಿಲ್ಲ ಎಂದು ಬಗೆಬಗೆಯ ಕಂಪು ಸೂಸುವ ಹೂಮಾಲೆಯನ್ನು ಹಾಕಿ ಹಿಗ್ಗಿ ರುಚಿಯಾದ ಹಣ್ಣುಗಳನ್ನು ತಾನೇ ಕೈಯಾರೆ ನೀಡಿ ಉಪಚರಿಸಿದಳು.

**೫. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?**

ಉ) ಈ ಕಾಡಿನ ಮಧ್ಯದಲ್ಲಿ ನಾವು ನೀನು ನೀಡಿದ ಆದರಾತಿಥ್ಯ ಪಡೆದ ಪುಣ್ಯ ನಮ್ಮದು. ನಾವು ನಿನಗೆ ಎಂದಿಗೂ ಋಣಿಗಳಾಗಿರುವೆವು. ಕಣ್ಣೀರೇಕೆ? ನೀನು ಯಾವ ಕೊರತೆಯನ್ನು ಮಾಡಿಲ್ಲ ನಮ್ಮ ಅರಮನೆ ಸುಖಕ್ಕಿಂತ ಮಿಗಿಲಾಗಿದೆ. ನಾವು ಕಾಡಿನಲ್ಲಿರುವೆವು ಎಂಬುದನ್ನೆ ಮರೆತೆವು. ಇಷ್ಟು ಆದರ ತೋರುವ ನೀನು ನಮ್ಮ ತಾಯಿಯಂತೆ ಎಂದು ಹೇಳಿದರು.

**ಇ) ೮-೧೦**

**೧. ಶಬರಿ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.**

ಉ) ರಾಮಲಕ್ಷ್ಮಣರನ್ನು ಕಂಡು ಶಬರಿ ಹಿಗ್ಗಿ, ಸಂತಸವನ್ನು ತುಂಬಿಕೊಳ್ಳುತ್ತಾಳೆ. ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸಂತೈಸುತ್ತಾಳೆ. ರಾಮನನ್ನು ಕಂಡ ತಾನು ಪರಮಸುಖಿಯೆಂದು ನರ್ತಿಸುತ್ತಾಳೆ. ರಾಮನೂ ಕೂಡ "ನಿನ್ನ ಆದರದಿಂದ ನಾವು ಸುಖಿ, ನಿನಗೆ ನಾವು ಋಣಿ" ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು "ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು ತೃಷೆ ಹಿಂಗೀತೆ? ನಾನೊಬ್ಬಳು ಬಡವಿ, ನನ್ನ ಮೇಲೆ ಮರುಕ ತೋರಿದಿರಾ?" ಎನ್ನುತ್ತಾಳೆ "ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ, ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ, ನಿನ್ನ ಮನೆಯೇ ನಮ್ಮ ಮನೆ, ನೀನೇ ತಾಯಿಯಂತೆ" ಎನ್ನುತ್ತಾನೆ. ಶಬರಿಯು "ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ. ನಾನು ಧನ್ಯಳಾದ ಸಿದ್ಧ ಮಾತಂಗರ ವರ ನನಗೆ ಫಲಿಸಿತು. ನಿಮ್ಮನ್ನು ಕಂಡು ಪುಣ್ಯವು ತುಂಬಿತು. ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು" ಎನ್ನುವಳು. ಶ್ರೀರಾಮನು ಗುರುಗಳ ಮಹಿಮೆಯನ್ನು ಬಲ್ಲೆನೆಂದು ಹೇಳುತ್ತ. ದುಃಖವನ್ನು ಮರೆಸಿ, ಶಾಂತಿ ನೀಡುವ ಈ ವನದಲ್ಲಿ ನೀನು ಶುದ್ಧ ಪ್ರೇಮ ಮೂರ್ತಿಯಾಗಿದ್ದೀಯೆ. ಈ ದಿನ ನಮಗೆ ಸುದಿನ" ಎಂದು ಶಬರಿಯನ್ನು ಬಾಯಿತುಂಬ ಹೊಗಳುತ್ತಾನೆ.

**೨. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?**

ಉ) ಶ್ರೀ ರಾಮ ಲಕ್ಷ್ಮಣರು ಶಬರಿಯ ಬಳಿ ಬಂದಾಗ ಅವರನ್ನು ಕಂಡ ಶಬರಿಯು ಬೆರಗಾದಳು ನಂತರ ತಾನು ಕಾಣುತ್ತಿರುವುದು ನಿಜವೋ ಕನಸೋ ಎಂದು ಹತ್ತಿರ ಹೋಗಿ ರಾಮನನ್ನು ಮುಟ್ಟಿ ನೋಡಿ ಪುಳಕಿತಳಾದಳು. ಆತನ ಪಾದಗಳಿಗೆ ನಮಸ್ಕರಿಸಿ ಕಣ್ಣಿಗೊತ್ತಿಕೊಂಡು, ಕಣ್ಣೀರು ಸುರಿಸಿ ಪಾದತೊಳೆದು ಗದ್ಗದ ಸ್ವರದಿಂದ ಒಳಗೆ ಬನ್ನಿ ಎಂದು ಕರೆದಳು. "ಸಿದ್ಧತೆಯೇ ಇಲ್ಲವಲ್ಲ" ಎಂದು ಹಂಬಲಿಸಿದಳು. ನಿನ್ನೆಯಷ್ಟು ಚೆನ್ನಾಗಿಲ್ಲ. ಎಂದು ಹಂಬಲಿಸುತ್ತ ತನ್ನ ಬಯಕೆಯಂತೆ ಬಗೆಬಗೆಯ ಕಂಪಿನಿಂದ ಕೂಡಿರುವ ಹೂಮಾಲೆಯನ್ನು ಹಾಕಿ ಹಿಗ್ಗಿದಳು. ಇದರಷ್ಟು ರುಚಿಯಾದ ಹಣ್ಣು ಈ ಜಗದೊಳಿಲ್ಲ ಎಂದು ಹೇಳುತ್ತ ನಿಮಗಾಗಿಯೇ ತಂದಿರುವೆನೆಂದು ತಾನೇ ಕೈಯಾರೆ ನೀಡಿ ತಿನ್ನಿಸಿ ಉಪಚರಿಸಿ ಸಂತಸ ಪಟ್ಟಳು. ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸ ಬೀರಿದರು. ಹೀಗೆ ಶಬರಿ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

**೩. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?**

ಉ) ಶಬರಿ ಮತಂಗಾಶ್ರಮದಲ್ಲಿ ಇರುತ್ತಾಳೆ. ಸಿದ್ಧರಾದ ಮಾತಂಗ ಋಷಿಗಳು ಶಬರಿಯ ಮನದಾಸೆಯನ್ನು ತಿಳಿದವರಾಗಿದ್ದು, "ರಾಮಲಕ್ಷ್ಮಣರು ಆಶ್ರಮಕ್ಕೆ ಬಂದೇ ಬರುತ್ತಾರೆ. ನಿನ್ನ ಇಷ್ಟಾರ್ಥ ನೆರವೇರುತ್ತದೆ." ಎಂದಿದ್ದರು. ಅವರ ಮಾತಿನಂತೆ ರಾಮಲಕ್ಷ್ಮಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಶಬರಿಯು ರಾಮನ ದರ್ಶನ ಮಾಡಿ, ಮುಟ್ಟಿ, ನಮಸ್ಕರಿಸಿ, ಸಂಭ್ರಮಿಸಿದಳು. ಪರಿಮಳದ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ, ರುಚಿಕರ ಹಣ್ಣುಗಳನ್ನು ನೀಡಿ ಉಪಚರಿಸಿದಳು. ಧನ್ಯಳಾದೆನೆಂದು ಸಂತಸ ವ್ಯಕ್ತಪಡಿಸಿದಳು. ಹಲವಾರು ವರ್ಷಗಳಿಂದ ರಾಮನದರ್ಶನಕ್ಕಾಗಿ ಕಾದು, ಮುನಿಗಳ ಮಾತನ್ನು ನಂಬಿ, ರಾಮನು ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಯಿತು. ಶಬರಿಯ ಮನದಾಸೆ ಈಡೇರಿತು. ಇದು ದಾಸರವಾಣಿ "ನಂಬಿಕೆಟ್ಟವರಿಲ್ಲ" ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

**ಈ) ಸಂದರ್ಭ**

**೧ "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."**

ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ 'ಶಬರಿ' ಎಂಬ ಗೀತನಾಟಕದಿಂದ ಆರಿಸಲಾಗಿದೆ.

ಈ ಮಾತನ್ನು ರಾಮನು ಲಕ್ಷ್ಮಣನಿಗೆ ಹೇಳಿದನು

**ಸಂದರ್ಭ:** ದನುವಿನ ಸೂಚನೆಯಂತೆ ರಾಮಲಕ್ಷ್ಮಣರು ಮತಂಗಾಶ್ರಮ ಬಳಿ ಬಂದಾಗ ಅಲ್ಲಿದ್ದ ರಾಮನನ ಧ್ಯಾನದಲ್ಲಿ ಬರುತ್ತಿರುವುದನ್ನು ಕಂಡು ಶ್ರೀರಾಮನು ಲಕ್ಷ್ಮಣನಿಗೆ ಈ ಮೇಲಿನಂತೆ ಹೇಳಿದನು.

**ಸ್ವಾರಸ್ಯ:** ಶ್ರೀರಾಮನ ಬರುವಿಕೆಗೆ ಕಾದು, ಕಾತರಿಸಿ, ಮರಳುವಂತೆ ಆಗಿದ್ದ ವೃದ್ಧೆ ಶಬರಿಯನ್ನು ಕಂಡು ರಾಮಲಕ್ಷ್ಮಣರು ಭಯಗೊಂಡದ್ದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

**೨. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."**

ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ 'ಶಬರಿ' ಎಂಬ ಗೀತನಾಟಕದಿಂದ ಆರಿಸಲಾಗಿದೆ.

ಈ ಮಾತನ್ನು ರಾಮನು ಲಕ್ಷ್ಮಣನಿಗೆ ಹೇಳಿದನು

**ಸಂದರ್ಭ:** ತನ್ನಿಂದ ಇನಿತು ಉಪಕಾರವಿಲ್ಲದಿದ್ದರೂ ತನ್ನನ್ನು ಪ್ರಿತಿಯಿಂದ ನೆನೆಯುತ್ತ ಹಂಬಲಿಸುತ್ತಿರುವ ವೃದ್ಧೆ ಶಬರಿಯನ್ನು ಕಂಡ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಹೇಳಿದನು.

**ಸ್ವಾರಸ್ಯ:** ಶಬರಿ ರಾಮನ ಬರವಿಗಾಗಿ ಕಾಯುತ್ತಾ ಅವನ ಧ್ಯಾನದಲ್ಲಿ ಭಕ್ತಿ ಪ್ರೀತಿಯನ್ನು ವ್ಯಕ್ತಪಡಿಸುತ್ತಿರುವುದನ್ನು ಕಂಡ ರಾಮನು "ಅವಳ ಅನುರಾಗವನ್ನು ಕಂಡು ನಾಚಿದನು" ಎಂದು ಸ್ವಾರಸ್ಯ ಪೂರ್ಣವಾಗಿದೆ.

**೩. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"**

ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ 'ಶಬರಿ' ಎಂಬ ಗೀತನಾಟಕದಿಂದ ಆರಿಸಲಾಗಿದೆ.

ಈ ಮಾತನ್ನು ರಾಮನು ಶಬರಿಗೆ ಹೇಳಿದನು.

ರಾಮಲಕ್ಷ್ಮಣರು ಕಾಡಿನಲ್ಲಿ ಅಲೆಯುತ್ತಾ ದನು ಹೇಳಿದಂತೆ ಮತಂಗಾಶ್ರಮದ ಕಡೆ ಬಂದರು. ಆಗ "ಎಂದು ಕಾಣುವೆನು ಶ್ರೀರಾಮನನ್ನು, ಸನ್ಮಂಗಳ ಮೂರುತಿಯನ್ನು" ಎಂದು ಹಾಡುತ್ತ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡ ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತ ರಾಮನು ಏನೂ ಅರಿಯದಂತೆ "ದಾರಿಗರಾದ ನಮಗೆ ಎಲ್ಲಿ ಉಳಿದಕೊಳ್ಳಲು ಸ್ಥಳವಾಕಾಶ ದೊರೆಯುವುದೇ?" ಎಂದು ಕೇಳುವುದು ಸ್ವಾರಸ್ಯ ಪೂರ್ಣವಾಗಿದೆ.

**೪. "ರೂಪಿನಂತೆ ಮಾತುಕೂಡ ಎನಿತುದಾರವಾಗಿದೆ?"**

ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ 'ಶಬರಿ' ಎಂಬ ಗೀತನಾಟಕದಿಂದ ಆರಿಸಲಾಗಿದೆ.

ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕಿಂತ ಮಿಗಿಲಾದುದು, ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ.

**ಸ್ವಾರಸ್ಯ:** "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾಳೆ.

**೫. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."**

ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ 'ಶಬರಿ' ಎಂಬ ಗೀತನಾಟಕದಿಂದ ಆರಿಸಲಾಗಿದೆ.

ಈ ಮಾತನ್ನು ಶ್ರೀ ರಾಮನು ಲಕ್ಷ್ಮಣನಿಗೆ ಹೇಳಿದ್ದಾನೆ.

ಶ್ರೀರಾಮನನ್ನು ಕಾಣುವ ಹಂಬಲದಿಂದ ಮುಪ್ಪಾದ ಶಬರಿಗೆ ರಾಮನು ದರ್ಶನ ನೀಡಿ ಆಕೆಯ ಇಚ್ಛೆಯಂತೆ ಮುಕ್ತಿಯನ್ನು ಕರುಣಿಸಿದನು. ರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿಯನ್ನು ಪ್ರವೇಶಿಸಿದ ಸಂದರ್ಭದಲ್ಲಿ ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** "ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ" ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.